ಯೋಗಮಿತ್ರರು ದೊಡ್ಡ ಉಪಕಾರ ಮಾಡಿದರು. ಆಗಲೇ ಕಾಯ್ಕಿಣಿಯವರ ಪುಸ್ತಕ ಓದಿದ್ದರೂ ಈಗ ಬೇರೊಂದು ದಿಕ್ಕಿನಿಂದ ಇನ್ನಷ್ಟು ವಿವರಗಳು ಸೇರಿಕೊಂಡು ಬುದ್ಧಿಜೀವಿಯ ಸರಿಯಾದ ಸ್ವರೂಪವೊಂದು ಮೂಡತೊಡಗಿತು. ನಾನೇ ಶೋಧಿಸುತ್ತಾ ಹೋದರೂ ಇನ್ನೊಂದಷ್ಟು ದಿನಗಳ ಬಳಿಕ ನನಗಿದು ತಿಳಿಯುತ್ತಿತ್ತು. ಆದರೆ ಆಗಲೂ ಬುದ್ಧಿಯೇ ಅಂತಿಮವಾದುದು ಎಂದು ತಿಳಿಯುತ್ತಿದ್ದೆ. ಹಾಗಲ್ಲ, ಅದಕ್ಕಿಂತ ಮುಂದೆ ಮನುಷ್ಯ ಆನಂದಮಯ ಸ್ಥಿತಿಯನ್ನು ಪಡೆದುಕೊಳ್ಳಲು ನಮ್ಮ ಉಪಕರಣ ಅದು, ಆದುದರಿಂದ ಮಹತ್ವದ್ದು ಕೂಡ ಹೌದು ಎಂಬುದಾಗಿ ಯೋಗಾಚಾರ್ಯ ಮಿತ್ರರು ಆ ಬೆಳಗ್ಗೆ ನನಗೆ ಪಾಠ ಹೇಳಿದರು. ಮನುಷ್ಯ ಬುದ್ಧಿಯ ಬಲದಿಂದ ಪಡೆಯಬೇಕಾದ ಸಿದ್ಧಿ ದೊಡ್ಡದು ಎಂದಾಯಿತು... ಇರಲಿ, ಇನ್ನೂ ಕೊಂಚ ಯೋಚಿಸುವುದಿದೆ.

ಕವಿಯಾದುದರಿಂದ ನಾನೊಬ್ಬ ಭಾವಜೀವಿ ಎಂಬ ಆರೋಪ ನನ್ನ ಮೇಲಿದೆ. ತರಲೆ ಪ್ರಶ್ನೆ

